ಮೇಷ್ಟ್ರು ಈಗ ಯೋಚಿಸಿದರೆ ತುಂಬಾ ಒಳ್ಳೆಯವರೇ. ಮುಂದಿನ ದಿನಗಳಲ್ಲಿ ಪಾಠ ಮಾಡುವಾಗ ಕೇಳುತ್ತಿದ್ದರು: ''ಏನಪ್ಪಾ ನರಸಿಂಹ, ಮತ್ತೆಲ್ಲಾದರೂ ತಪ್ಪು ಮಾಡಿದೆನೇನಪ್ಪ? ಸಂಕೋಚವಿಲ್ಲದೆ ಹೇಳು. ತಿದ್ದಿಕೊಳ್ಳೋಣ.'' ಅಷ್ಟು ದೊಡ್ಡವರು ಹಾಗೆ ಹೇಳಿದಾಗ ಮರ್ಯಾದೆ ಆಗುತ್ತಿತ್ತು. ಎಲ್ಲಾ ಮಕ್ಕಳೆದುರು ಒಂದು ದಿನ ಹೇಳಿದೆ: ''ಸರ್, ಅಂದು ನಾನು ದುಡುಕಿದೆ. ಮತ್ತೆ ಅಂಥಾ ತಪ್ಪು ಮಾಡೋದಿಲ್ಲ.'' ಕ್ಲಾಸಿನಲ್ಲೇ ಎಲ್ಲರ ಎದುರು ನನ್ನನ್ನು ಅಪ್ಪಿಕೊಂಡರು. ಅವರ ಪ್ರೀತಿಯ ಶಿಷ್ಯನಾದೆ. ಪಬ್ಲಿಕ್ ಪರೀಕ್ಷೆಯಲ್ಲಿ ನೂರಕ್ಕೆ ನೂರು ಅಂಕ ಪಡೆದು ಅವರ ಋಣ ತೀರಿಸಿದೆ.

ಮುಂದೆ ನಾನೂ ಮೇಷ್ಟ್ರಾದೆನಲ್ಲ, ಮೇಲಿನ ಪ್ರಕರಣ ಮರೆಯಲಿಲ್ಲ. ತುಂಬ ಎಚ್ಚರಿಕೆ ವಹಿಸುತ್ತಿದ್ದೆ. ಮಕ್ಕಳು ಯಾರಾದರೂ ತರಗತಿಯಲ್ಲಿ ನಾನು ಬೋರ್ಡಿನಲ್ಲಿ ಬರೆಯುವಾಗ ತಪ್ಪು ಮಾಡಿದ್ದನ್ನು ತೋರಿಸಿದರೆ ಧನ್ಯವಾದ ಹೇಳಿ ಆ ತಪ್ಪನ್ನು ಸರಿ ಮಾಡಿಕೊಳ್ಳುತ್ತಿದ್ದೆ. ಇದನ್ನು ಯಾಕೆ ಹೇಳುತ್ತಿದ್ದೇನೆ ಎಂದರೆ ನನ್ನ ಸಿಟ್ಟಿನಿಂದ ಅಂತಿಮವಾಗಿ ನನಗೆ ಒಳ್ಳೆಯದೇ ಆಗಿದೆ! ಹಾಗಿದ್ದೂ ಮಾಸ್ತರಿಕೆ ಬಿಟ್ಟು ಬಂದೆ. ಶಾಲೆ ನಡೆಸುತ್ತಿದ್ದ ಆಡಳಿತ ಮಂಡಳಿಯ ಜೊತೆ ಒಂದು ಸಂದರ್ಭದಲ್ಲಿ ಸಮಸ್ಯೆ ಉಂಟಾಯಿತು. ಕಾರಣ ಯಾರೂ ಊಹಿಸಬಹುದು ಅಂದುಕೊಳ್ಳುತ್ತೇನೆ. ಅವರು ಹೇಳಿದಂತೆ ನಾನು ಕೇಳಲಿಲ್ಲ, ಅಷ್ಟೆ. ಸಮಿತಿಯ ಕಡೆಯ ಒಬ್ಬ ಹುಡುಗನನ್ನು ಮುಂದಿನ ತರಗತಿಗೆ ಎತ್ತಿ ಹಾಕಲು ನಾನು ತಡೆಯಾಗಿದ್ದೆ. ಹುಡುಗನಿಗೆ ಗಣಿತ ಸರಿಯಾಗಿ ಬಾರದು. ಆತನಿಗಾಗಿ ತುಂಬಾ ಶ್ರಮಪಟ್ಟೆ, ಕೂಡ. ಆದರೆ, ಅವನಿಗೆ ವಿದ್ಯೆ ತಲೆಗೆ ಹತ್ತಲಿಲ್ಲ. ಇಂಥ ಹುಡುಗನಿಗೆ ಇನ್ನೂ ಹತ್ತು ತಾಸು ಪಾಠ ಹೇಳಿಕೊಡಿ ಎಂದರೂ ಆಗಬಹುದು. ಪರೀಕ್ಷೆಯಲ್ಲಿ ಪಾಸು ಮಾಡಿ ಎಂದರೆ ಹೇಗೆ? ಪರೀಕ್ಷೆ ಮಾಡುವುದೇ ಒಂದು ನಾಟಕ ಆದೀತಲ್ಲವೆ? ಮುಂದಾದರೂ ಆತ ಹೇಗೆ ಕಲಿಯುತ್ತಾನೆ? ಈ ವರ್ಷ ಇರುವ ತರಗತಿಯಲ್ಲೇ ಇರಲಿ, ಆದಷ್ಟೂ ಪ್ರಯತ್ನ ಮಾಡಲಿ, ನಾವೂ ಅವನಿಗೆ ಇನ್ನಷ್ಟು ಲಕ್ಷ್ಯ, ಸಮಯ ಕೊಟ್ಟು ಕಲಿಸೋಣ ಎಂದು ನಯವಾಗೇ ಹೇಳಿದೆ. ಆದರೆ, ಸಮಿತಿಯವರಿಗೆ ಇದು ಪ್ರತಿಷ್ಠೆಯ ವಿಷಯವಾಗಿ ಹೋಯಿತು. ಹೆಡ್ ಮಾಸ್ಟರ್ ಆದಿಯಾಗಿ ಎಲ್ಲರೂ ಹೊಂದಿಕೊಂಡು ಹೋಗುವಂತೆ ಬುದ್ಧಿ ಹೇಳಿದರು. ದಿನಗಳು ಕಳೆದಂತೆ ಈ ವಿಷಯಕ್ಕೆ ಒಬ್ಬರ ಮುಖ ಒಬ್ಬರು ನೋಡಲಾಗದ ಸ್ಥಿತಿ ಬಂತು. ಮತ್ತೆ ಒಂದು ದಿನ ಮೀಟಿಂಗ್ ಆಯಿತು. ನಾನು ಉದ್ವೇಗದಿಂದ ಹೇಳಿದೆ: ''ವಿದ್ಯಾಮಾತೆಗೆ ಅವಮಾನ ಮಾಡ್ತಾ ಇದ್ದೀರಿ. ಪರೀಕ್ಷಾ ವ್ಯವಸ್ಥೆಯನ್ನು ಸದೃಢಗೊಳಿಸಬೇಕಾದವರು ಅದನ್ನೇ ದುರ್ಬಲ ಮಾಡ್ತಾ ಇದ್ದೀರಿ. ನಾನು ಸರ್ವಥಾ ಇದಕ್ಕೆ ಒಪ್ಪಲಾರೆ.'' ಸಮಿತಿಯ ಅಧ್ಯಕ್ಷರು ತಮ್ಮ ತೀರ್ಮಾನವೇ ಅಂತಿಮವೆಂದೂ ತಮ್ಮ ನಿರ್ದೇಶನದಂತೆ ನಡೆದುಕೊಳ್ಳಬೇಕಾದದ್ದು ನನ್ನ ಕರ್ತವ್ಯವೆಂದೂ ಅಧಿಕಾರವಾಣಿಯಿಂದ ಹೇಳಿದರು. ನಾನು ಒಪ್ಪಲಿಲ್ಲ. ''ಪರೀಕ್ಷೆಯ ಮೌಲ್ಯಮಾಪನದ ಅಧಿಕಾರ ನನ್ನದು. ಯಾರೂ ಇದರಲ್ಲಿ ಕೈ ಹಾಕುವಂತಿಲ್ಲ. ಇದರಲ್ಲಿ ನನ್ನ ತೀರ್ಮಾನವೇ ಅಂತಿಮವಾದುದು.'' ಗದ್ದಲ ಶುರುವಾಯಿತು. ''ನಿಮ್ಮನ್ನು ಈ ಕ್ಷಣದಿಂದ ಕೆಲಸದಿಂದ ಕಿತ್ತು ಹಾಕಬಹುದು, ಜ್ಞಾಪಕದಲ್ಲಿರಲಿ'' ಎಂದರು. ''ಜ್ಞಾಪಕದಲ್ಲಿದೆ ಸ್ವಾಮಿ. ಅಷ್ಟೊಂದು ಕಷ್ಟ ಪಡಬೇಡಿ. ರಾಜೀನಾಮೆ ಸ್ವೀಕರಿಸಬಹುದು'' ಎಂದು ಆಗಲೇ ಬರೆದುಕೊಂಡು ಬಂದಿದ್ದ ಪತ್ರವನ್ನು ಅಧ್ಯಕ್ಷರಿಗೆ ಒಪ್ಪಿಸಿದೆ. ಆ ದಿನ ಎಲ್ಲವೂ ಗೊಂದಲದಲ್ಲಿಯೇ ಮುಕ್ತಾಯವಾಯಿತಾದರೂ ಒಂದೆರಡು ದಿನ ಬಿಟ್ಟು ನನ್ನ ರಾಜೀನಾಮೆ ಅಂಗೀಕರಿಸಿರುವುದಾಗಿ ಹೆಡ್ ಮಾಸ್ಟರು ತಿಳಿಸಿದರು. ಇದು ನಾನು ಶಿಕ್ಷಕನಾಗಿ ಪಡೆದ ಅನುಭವ. ನೌಕರಿ ಕಳೆದುಕೊಂಡು ತೊಂದರೆ ಅನುಭವಿಸಬೇಕಾಯಿತು. ತೊಂದರೆಯಿಲ್ಲ ಬಿಡಿ, ನಮ್ಮ ಹೊಲ, ತೋಟ ನಮ್ಮನ್ನು ಸಾಕಿದವು. ನಾನೂ ಅವುಗಳನ್ನು ಚೆನ್ನಾಗಿ ನೋಡಿಕೊಂಡೆ. ನನ್ನ ಅಪ್ಪ ಮಾತ್ರ ಈ ಹುಡುಗನಿಗೆ ಕಲಿಸಿಯೂ ಪ್ರಯೋಜನವಿಲ್ಲದೆ ಹೋಯಿತು ಎಂದು ಪೇಚಾಡಿಕೊಂಡರಂತೆ!